ಬಯಸಿದರೂ ಯಾರೂ ಕಿವಿಗೆ ಹಾಕಿಕೊಳ್ಳಲಿಲ್ಲ. ಆಮೇಲೆ ನಮ್ಮೋರೆಲ್ಲ ಅವರವರೇ ಆಗೋಕೇ ಶುರುವಾದ್ರು. ಯಾರೂ ನನ್ನನ್ನು ನಮ್ಮೋನು ಅಂತ ಸೇರಿಸಲಿಲ್ಲ. ಇದೇ ದೊಡ್ಡ ಆಘಾತ ನನಗೆ.



◆ ಮಾರಮ್ಮ ಉತ್ಸವಗಳಲ್ಲೆಲ್ಲಾ ಹಾಡಿದ್ದೀರಾ?

ಸಾಕಷ್ಟು ಸಾರಿ ಹಾಡಿದ್ದೀನಿ. ಚಿಕ್ಕನಾಯಕನಹಳ್ಳಿಯಲ್ಲಿ ಜಾಸ್ತಿ. ಅಲ್ಲಿಗೆ ಹೋಗಿಬಿಡ್ತಿದ್ದೆ. ನಮ್ಮ ಹುಡುಗ್ರೇ ಕರೆಯುತ್ತಿದ್ದರು.

◆ ಈಗ ಹರಿಕಥೆ ಓದಿಸುವವರಿಲ್ಲ. ಹಾಡಿಸುವವರಿಲ್ಲ. ಮುಖ್ಯವಾಗಿ ಕೇಳುವವರೂ ಇಲ್ಲ. ಹಾಗಾದ್ರೆ ಈ ಪರಂಪರೆ ಮುಂದುವರಿಸೋದು ಹೇಗೆ?

ಆ ಚಾಲೆಂಜೇ ಇಲ್ಲ ಈಗ. ಎಲ್ಲಾನು ಹೋಗಿಬಿಟ್ಟದೆ. ಯಾವ ಹುಡುಗರಿಗೂ ಬೇಕಾಗಿಲ್ಲ. ಮಕ್ಕಳನ್ನೂ ಓದಿಸಿ, ಅವರನ್ನು ದುಡಿಯುವ ಹಾಗೆ ಮಾಡಬೇಕು ಅನ್ನೋ ಮನಸ್ಸಿದೆಯೇ ಹೊರತು– ನಮ್ಮ ಪರಂಪರೆ, ಕಲೆ, ಸಂಗೀತ ಇವುಗಳನ್ನು ಕಲಿಸಬೇಕು ಅಂತ ಯಾರಿಗೂ ಇಲ್ಲ.

◆ ಹರಿಕಥಾ ಕೀರ್ತನ ಹಾಡುವುದಕ್ಕೆ ದೈವರೂಪ ಇರುತ್ತೆ. ಒಂದು ಆಚರಣೆ ಕೂಡ ಇರುತ್ತೆ. ಗಣೇಶ ಉತ್ಸವ, ಇನ್ನಾವುದೋ ಇದ್ದರೆ ಅಲ್ಲಿ ಹರಿಕಥೆಗೆ ಜಾಗ ಇರುತ್ತೆ. ಒಂದು ವೇದಿಕೆಯಲ್ಲಿ ಹಾಡುವುದಕ್ಕೂ, ಆಚರಣೆಯ ಭಾಗದಲ್ಲಿ ಹಾಡುವುದಕ್ಕೂ, ದೇವರ ಸನ್ನಿದಿಯಲ್ಲಿ ಹಾಡುವುದಕ್ಕೂ, ಮನೆಯಲ್ಲಿ ಹಾಡುವುದಕ್ಕೂ ಏನಾದರೂ ವ್ಯತ್ಯಾಸ ಆಗುತ್ತಿತ್ತಾ ನೀವು ಮಾಡುವಾಗ?

ಆಗುತ್ತಿತ್ತು. ಈಗ ಚಾಮುಂಡೇಶ್ವರಿ ಕೂರಿಸಿರುತ್ತಾರೆ. ಅದರ ಪಕ್ಕದಲ್ಲಿ ನಿಂತು ಕಥೆ ಮಾಡಬೇಕಾದರೆ ಅವಾಗ ಆ ಸ್ಮರಣೆ ಬಂದೇ ಬರುತ್ತೆ. ಆ ದೈವಿಕ ಪ್ರಜ್ಞೆ ಆ ಜನರಲ್ಲಿ ಶ್ರೋತೃಗಳಲ್ಲಿ ಮೂಡಿಸುವಂತಹ ರೀತಿಯಲ್ಲಿಯೇ ಕಥೆ ಮಾಡಬೇಕು. ಸಾರ್ವಜನಿಕ ಪ್ರದೇಶಗಳಲ್ಲಿ ಎಲ್ಲೋ ನಿಂತ್ಕಂಡು, ಕೂತ್ಕಂಡು ಕಾಫಿ ಕುಡ್ಕಂಡೋ, ಬೀಡಿಗೀಡಿ ಸೇತ್ಕಂಡೋ ಕೇಳುಸ್ಕಳ್ತಾರೆ. ಅಲ್ಲಿ ಹಾಡುವ ಕ್ರಮವೇ ಬೇರೆ.

◆ ನೀವು ರಂಗಭೂಮಿ ನಟರು ಕೂಡ. ಈಗ 'ದಲಿತ ರಂಗಭೂಮಿ', 'ದಲಿತ ಏಸ್ಥೆಟಿಕ್' ಇತ್ಯಾದಿಯಾಗಿ ದಲಿತ ಲೋಕ ವಿಸ್ತಾರವಾಗುತ್ತಿದೆ. ಈ 'ದಲಿತ ರಂಗಭೂಮಿ' ನಿಮ್ಮ ದೃಷ್ಟಿಯಲ್ಲಿ ಹೇಗಿದೆ?

'ದಲಿತ ರಂಗಭೂಮಿ' ಎಂದಾಗ ದಲಿತ ಕಥಾ ವಸ್ತುಗಳನ್ನು ತೆಗೆದುಕೊಳ್ತೀವಲ್ಲ. ಬಾಬಾಸಾಹೇಬ್ ಅಂಬೇಡ್ಕರ್ ತಗೊಳ್ತೀವಿ, ಫುಲೆ ತಗೋಳ್ತಿವಿ, ಜಗಜೀವನ ರಾಮ್ ಅವರನ್ನು ತಗೊಳ್ತೀವಿ. ಇಂಥ ವ್ಯಕ್ತಿಗಳನ್ನು ಕೇಂದ್ರೀಕರಿಸಿಕೊಂಡು ಕಥೆ ಮಾಡುವಾಗ ಇನ್ವಾಲ್‌ಮೆಂಟ್ ಬೇಕೇಬೇಕಾಗುತ್ತೆ. ದಲಿತ ರಂಗಭೂಮಿಗೆ ಒಂದು ಶಕ್ತಿ ಇದೆ. ಬಸವಲಿಂಗಯ್ಯ ಅವರು ಬೆಳೆದಿದ್ದು ಯಂಗೆ? ಜನಾರ್ದನ್ ಬೆಳೆದಿದ್ದು ಯಂಗೆ? ದಲಿತ ರಂಗಭೂಮಿಯಿಂದಲೇ ಬೆಳೆದಿದ್ದು. ಅದರೊಳಗೆ ಇಟ್ಟುಕೊಂಡೇ ಅವಾಹಿಸಿಕೊಳ್ಳಬೇಕು. ದಲಿತ ಆಚರಣೆಗಳು, ದಲಿತ ಜೀವನಕ್ರಮ ಈ ಕಾಲದಲ್ಲಿ ರಂಗಭೂಮಿಯಲ್ಲಿ ಕಾಣುತ್ತಿದೆ. ಈಗಂತೂ ಹೊಸ ತಲೆಮಾರು ದಲಿತ ಕಥಾವಸ್ತುವನ್ನೇ ತಗಂಡು ಲೋಕದರ್ಶನ ಮಾಡಿಸುತ್ತಿದ್ದಾರೆ. ಕೆ.ಪಿ. ಲಕ್ಷ್ಮಣ್, ಮೈತ್ರಿ ಮುಂತಾದವರೆಲ್ಲ ಇದರಲ್ಲಿ ತೊಡಗಿಸಿಕೊಂಡಿದ್ದಾರೆ. ಈಗ ಪ್ರೇಕ್ಷಕರ ಸಂಖ್ಯೆ ಜಾಸ್ತಿ ಆಗ್ತಾ ಇದೆ. ಸಾಂಪ್ರದಾಯಿಕ ವಸ್ತುಗಳಿಗಿಂತ ಇಂಥ ಪ್ರಯೋಗಾತ್ಮಕ ನಾಟಕಗಳ ಕಡೆ ಪ್ರೇಕ್ಷಕರು ಶಿಫ್ಟ್ ಆಗಿದ್ದಾರೆ. ಹಿಂದೆಲ್ಲಾ ನಾವು ಏನು ಹೇಳ್ತಿದ್ದವೋ ಅದನ್ನು ಕೇಳ್ಕೊಂಡು ಎದ್ದುಹೋಗ್ತಾ ಇದ್ರು. ಈ ಕಾಲದಲ್ಲಿ, ಪ್ರತಿಯೊಂದು ವಿಮರ್ಶಾತ್ಮಕವಾಗಿ ನೋಡ್ತಾರೆ. ಹಾಗಾಗಿ ಈಗ ಸವಾಲುಗಳು ಜಾಸ್ತಿ. ಅವುಗಳನ್ನೆಲ್ಲ ನಿಭಾಯಿಸೋದನ್ನು ನಮ್ಮ ಹೊಸ ಹುಡುಗರು ಕಲಿತುಕೊಂಡಿದ್ದಾರೆ ಅನ್ನೋದೆ ತುಂಬಾ ಖುಷಿ.

●